ದಿ: 19-08-2026ರ ಉತ್ತರ ಕ್ರಮ ಸಂ-10

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅಬ್ದುಲ್ ಜಬ್ಬಾರ್ ಇವರು ಶೂನ್ಯವೇಳೆ ಪ್ರಸ್ತಾಪಿಸಿರುವ ವಿಷಯಗಳಿಗೆ ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರ ಉತ್ತರ.**

********

**ಸೂಚನೆ:**

**ರಾಜ್ಯದಲ್ಲಿ ವಿವಿಧ ಭಾಗಗಳಲ್ಲಿ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ, ಪಡಿತರ ಪಡೆಯಲು ಹಿರಿಯ ನಾಗರಿಕರು ನ್ಯಾಯಬೆಲೆ ಅಂಗಡಿಗಳಿಗೆ ಪದೇಪದೇ ತೆರಳಿ ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾರಿರುವುದುದು ಅತ್ಯಂತ ಕಳವಳಕಾರಿ ವಿಷಯವಾಗಿದೆ. ಹಿಂದೆ ಬೆರಳಚ್ಚು ಅಳಿಸಿ ಹೋಗಿರುವವರಿಗೆ ನ್ಯಾಯಬೆಲೆ ಅಂಗಡಿಯಲ್ಲಿ ಒಟಿಪಿ ಮೂಲಕ ಪಡಿತರ ವಿತರಿಸುವ ವ್ಯವಸ್ಥೆ ಜಾರಿಯಲ್ಲಿತ್ತು. ಈ ಕ್ರಮದಿಂದಾಗಿ ವಯೋಸಹಜವಾಗಿ ಹೆಬ್ಬರಳು ಗೆರೆ ಅಳಿಸಿ ಬೆರಳಚ್ಚು ಮೂಡದವರಿಗೆ ಪಡಿತರ ಪಡೆಯಲು ಸಹಾಯವಾಗುತ್ತಿತ್ತು. ಆದರೆ, ಇದೀಗ ಆಹಾರ ಇಲಾಖೆ ವ್ಯವಸ್ಥೆ ಬದಲಿಸಿರುವ ಪರಿಣಾಮ ಹಿರಿಯರು ಪರಿತಪಿಸುವಂತಾಗಿದೆ. ಬೆರಳಚ್ಚು ಬಾರದೇ ಇರುವ ಹಿರಿಯರು ಪಡಿತರಕ್ಕಾಗಿ ಪ್ರತಿನಿತ್ಯ ನ್ಯಾಯಬೆಲೆ ಅಂಗಡಿಗಳಿಗೆ ಅಲೆದಾಡುವಂತಾಗಿದೆ.**

**ಪಡತರ ಪಡೆಯಲು ಸಾಧ್ಯವಾಗದ ವೃದ್ಧರು, ಮಹಿಳೆಯರು, ದೈಹಿಕ ಅಶಕ್ತ ಫಲಾನುಭವಿಗಳಿಗೆ ನೆರವಾಗಲು ಆಹಾರ ಇಲಾಖೆ "ಅನ್ನಸುವಿಧ" ಯೋಜನೆ ಜಾರಿಗೆ ತಂದಿದೆ. 75-80 ವರ್ಷ ಮೇಲ್ಪಟ್ಟ ಹಿರಿಯರ ಮನೆ ಬಾಗಿಲಿಗೆ ಉಚಿತವಾಗಿ ರೇಷನ್ ವಿತರಿಸುವುದು ಯೋಜನೆಯ ಉದ್ದೇಶ. ಈ ಸೇವೆ ಒದಗಿಸುವ ನ್ಯಾಯಬೆಲೆ ಅಂಗಡಿ ಮಾಲೀಕರಿಗೆ ಪ್ರತಿ ಕುಟುಂಬಕ್ಕೆ ರೂ.50ರಂತೆ ಸರ್ಕಾರ ಪಾವತಿಸುತ್ತದೆ. ಆದರೆ ಯೋಜನೆ ಸಮರ್ಪಕವಾಗಿ ಎಲ್ಲಿಯೂ ಅನುಷ್ಠಾನಕ್ಕೆ ಬಂದಿಲ್ಲ.**

**ಈ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ಈ ವಿಚಾರವನ್ನು ತೀರ್ವವಾಗಿ ಪರಿಗಣಿಸಿ, ಪಡಿತರ ಪಡೆಯುವುದು ಅರ್ಹ ಫಲಾನುಭವಿಗಳ ಕಾನೂನು ಬದ್ಧ ಆಹಾರ ಭದ್ರತೆಯ ಹಕ್ಕು ಆಗಿರುವುದರಿಂದ ತಾಂತ್ರಿಕ ಸಮಸ್ಯೆ ಅಥವಾ ವಯೋಸಹಜ ಕಾರಣಗಳಿಂದ ಒಬ್ಬ ಹಿರಿಯ ನಾಗರಿಕರು ಪಡಿತರದಿಂದ ವಂಚಿತರಾಗದಿರುವಂತೆ ನಿಗಾ ವಹಿಸಲು 70ವರ್ಷ ಮೇಲ್ಪಟ್ಟ ಹಾಗೂ ದೈಹಿಕವಾಗಿ ಅಶಕ್ತ ಹಿರಿಯ ನಾಗರಿಕರಿಗೆ ಬಯೋಮೆಟ್ರಿಕ್‌ಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವುದು. ಬೆರಳಚ್ಚು ಹೊಂದಿಕೆಯಾಗದಿದ್ದರೆ OTP, ಮುಖ ಗುರುತಿಸುವಿಕೆ ಅಥವಾ ಇತರೆ ಪರ್ಯಾಯ ದೃಢೀಕರಣ ವ್ಯವಸ್ಥೆ ಕಲ್ಪಿಸುವುದು ಹಾಗೂ ನಡೆಯಲು ಸಾಧ್ಯವಾಗದ, ಹಾಸಿಗೆ ಹಿಡಿದಿರುವ ಹಾಗೂ ಏಕಾಂಗಿಯಾಗಿ ವಾಸಿಸುವ ಹಿರಿಯ ನಾಗರಿಕರಿಗೆ ಮನೆ ಬಾಗಿಲಿಗೆ ಪಡಿತರ ತಲುಪಿಸುವ ವ್ಯವಸ್ಥೆ ಜಾರಿಗೊಳಿಸುವ ಕುರಿತು ಸೂಕ್ತ ಕ್ರಮ ಕೈಗೊಳ್ಳುವಂತೆ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.**

**ಉತ್ತರ:**

ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಸುತ್ತೋಲೆ ಸಂಖ್ಯೆ ಸಿಎಫ್‌ಎಸ್/ ಎಎಂಸಿ/ ಐಟಿ-3/ 08/2018-19, ದಿನಾಂಕ:07.06.2018 ರಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಹಾಗೂ ವಲಯಗಳ ಆಹಾರ ನಿರೀಕ್ಷಕರ ಲಾಗಿನ್‌ನಲ್ಲಿ ವಯೋವೃದ್ಧರು (ಕನಿಷ್ಠ 65 ವರ್ಷ ಮೇಲ್ಪಟ್ಟು), ಹಾಸಿಗೆ ಹಿಡಿದ ರೋಗಿಗಳು, ಅಂಗವಿಕಲರು, ಕುಷ್ಟರೋಗಿಗಳು, ಎಂಡೋಸಲ್ಫಾನ್ ಪೀಡಿತರು, 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಪಡಿತರ ಚೀಟಿದಾರರ ಪ್ರಕರಣಗಳಲ್ಲಿ ಸಾರ್ವಜನಿಕ ವಿತರಣಾ ಪದ್ಧತಿಯಡಿ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ವಿತರಿಸುವಾಗ ಬಯೋಮೆಟ್ರಿಕ್ ದೃಢೀಕರಣಕ್ಕೆ ವಿನಾಯಿತಿ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.

ಸದರಿ ವಿನಾಯಿತಿಯನ್ನು ಮೇಲ್ಕಂಡ ಪ್ರಕರಣಗಳಿಗೆ ಮಾತ್ರವೇ ಅನ್ವಯಿಸತಕ್ಕದ್ದು ಮತ್ತು ಇದು ಒಂದು ಬಾರಿ ನೀಡುವ ವಿನಾಯಿತಿಯಾಗಿರುತ್ತದೆ. ಆದ್ದರಿಂದ ಇಂತಹ ಪ್ರಕರಣಗಳನ್ನು ಸಂಬಂದಪಟ್ಟ ಆಹಾರ ನಿರೀಕ್ಷಕರು ಸೂಕ್ತ ಸ್ಥಳ ಪರಿಶೀಲನೆ ನಡೆಸಿ, ವೈದ್ಯಕೀಯ ಪ್ರಮಾಣಪತ್ರ, ವಯಸ್ಸಿನ ದೃಢೀಕರಣ ಪತ್ರ ಇತ್ಯಾದಿ ಅಗತ್ಯ ದಾಖಲಾತಿಗಳನ್ನು ಫಲಾನುಭವಿಗಳಿಂದ ಪಡೆದು, ಪ್ರಕರಣಗಳನ್ನು ಪರಿಶೀಲಿಸಿ ಯುಕ್ತ ಪರಿಶೀಲನೆಯ ತರುವಾಯ ಅವರ ಅರ್ಹತೆಯನ್ನು ಖಚಿತಪಡಿಸಿಕೊಂಡ ನಂತರವೇ ಸದರಿಯವರಿಗೆ ಬಯೋದೃಡೀಕರಣದಿಂದ ವಿನಾಯಿತಿ ನೀಡತಕ್ಕದ್ದು. ಪ್ರತಿಯೊಂದು ನ್ಯಾಯಬೆಲೆ ಅಂಗಡಿಗಳಲ್ಲಿ ಇರುವ ಪಡಿತರ ಚೀಟಿಗಳ ಒಟ್ಟು ಸಂಖ್ಯೆ ಶೇಕಡ 2% ರಷ್ಟು ಪ್ರಮಾಣವನ್ನು ಮೀರದಂತೆ ಇಂತಹ ಪ್ರಕರಣಗಳಿಗೆ ಬಯೋದೃಡೀಕರಣ ವಿನಾಯಿತಿ ನೀಡುವ ಅವಕಾಶ ಕಲ್ಪಿಸಲಾಗಿದೆ.

ಸದರಿ ವಿನಾಯಿತಿಯ ಕಾಲಾವಧಿಯು ಒಂದು ವರ್ಷವಾಗಿದ್ದು, ಪಡಿತರ ಚೀಟಿಗಳ ವಾರ್ಷಿಕ ಪರಿಷ್ಕರಣಾ ಸಮಯದಲ್ಲಿ ಪಡಿತರ ಚೀಟಿಗಳನ್ನು ಮತ್ತೊಮ್ಮೆ ಪರಿಶೀಲಿಸಿ ವಿನಾಯಿತಿಗೆ ಅರ್ಹರಿರುವ ಬಗ್ಗೆ ದೃಢೀಕರಿಸಿ ವಿಸ್ತರಿಸತಕ್ಕದ್ದು ಎಂದು ಆಯುಕ್ತರು, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಇವರ ಸುತ್ತೋಲೆ ದಿನಾಂಕ:07.06.2018 ರಲ್ಲಿ ತಿಳಿಸಲಾಗಿರುತ್ತದೆ.

ಅದರಂತೆ ದಿನಾಂಕ 18.08.2026 ರ ಅಂತ್ಯಕ್ಕೆ ಒಟ್ಟು 88,813 ಪಡಿತರ ಚೀಟಿಗಳು ಬಯೋಮೆಟ್ರಿಕ್ ದೃಡಿಕರಣದಿಂದ ವಿನಾಯಿತಿ ಪಡೆದುಕೊಂಡಿರುತ್ತಾರೆ.

ಬಯೋಮೆಟ್ರಿಕ್ ನೀಡಲು ಸಾಧ್ಯವಾಗದ ಪಡಿತರ ಚೀಟಿದಾರರ ಐರೀಸ್ ಸ್ಕ್ಯಾನ್ ಮಾಡಿ ಅಥವಾ ಪಡಿತರ ಚೀಟಿಯಲ್ಲಿರುವ ಇತರ ಕುಟುಂಬದ ಸದಸ್ಯರ ಬಯೋಮೆಟ್ರಿಕ್ ಅಥವಾ ಐರೀಸ್ ಸ್ಕ್ಯಾನ್ ಪಡೆದು ಪಡಿತರ ವಿತರಣೆ ಮಾಡಲು ಕ್ರಮವಹಿಸಲಾಗಿರುತ್ತದೆ. ಸರ್ವರ್ ಸಮಸ್ಯೆಗಳು ಕಂಡು ಬಂದಲ್ಲಿ ತುರ್ತಾಗಿ ಬಗೆಹರಿಸಲು ಕ್ರಮವಹಿಸಲಾಗುತ್ತಿದೆ.

ಮುಂದುವರೆದು, ರಾಜ್ಯ ಸರ್ಕಾರವು 2025-26 ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ 75 ವರ್ಷಕ್ಕಿಂತ ಮೇಲ್ಪಟ್ಟ ಏಕಸದಸ್ಯ AAY/PHH ಫಲಾನುಭವಿಗಳ ಮನೆ ಬಾಗಿಲಿಗೆ ಆಹಾರ ಧಾನ್ಯಗಳನ್ನು ತಲುಪಿಸುವ ಅನ್ನ ಸುವಿಧಾ ಯೋಜನೆಯನ್ನು ನವೆಂಬರ್-2025 ಮಾಹೆಯಿಂದ ಜಾರಿಗೊಳಿಸಲಾಗಿದ್ದು ಸದರಿ ಯೋಜನೆಯಡಿ 2,67,103 ಅರ್ಹ ಫಲಾನುಭವಿಗಳನ್ನು ಗುರುತಿಸಿದ್ದು, ಗುರುತಿಸಲಾದ ಫಲಾನುಭವಿಗಳಿಂದ ಸದರಿ ಯೋಜನೆ ವ್ಯಾಪ್ತಿಯಡಿ ಪರಿಗಣಿಸಲು ಸಹಮತಿಯನ್ನು ಪಡೆದು ಅವರ ಮನೆಬಾಗಿಲಿಗೆ ಪಡಿತರವನ್ನು ವಿತರಿಸಲು ಅಗತ್ಯ ಕ್ರಮವಹಿಸಲಾಗಿದೆ. ಸದರಿ ಯೋಜನೆಯನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಗತ್ಯ ಕ್ರಮವಹಿಸಲಾಗುತ್ತಿದೆ.

**ಇ-ಆನಾಸ 255 ಡಿಆರ್ಎ 2026**

**(ರಿಜ್ವಾನ್ ಅರ್ಷದ್)**
ಆಹಾರ, ನಾಗರಿಕ ಸರಬರಾಜು, ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು
ಮಾಪನಶಾಸ್ತ್ರ ಸಚಿವರು

## District wise 2% Exemption RCs Count as on 18.08.2026

| Sl. | District | AAY RCs | PHH RCs | Total |
|---|---|---|---|---|
| 1 | BAGALKOTE | 57 | 741 | 798 |
| 2 | BALLARI | 94 | 197 | 291 |
| 3 | BANGALORE EAST IRA | 8 | 130 | 138 |
| 4 | BANGALORE NORTH IRA | 3 | 160 | 163 |
| 5 | BANGALORE SOUTH IRA | 2 | 31 | 33 |
| 6 | BANGALORE WEST IRA | 7 | 252 | 259 |
| 7 | BELAGAVI | 184 | 8,421 | 8,605 |
| 8 | BENGALURU | 26 | 1,921 | 1,947 |
| 9 | BENGALURU RURAL | 41 | 2,479 | 2,520 |
| 10 | BIDAR | 92 | 903 | 995 |
| 11 | CHAMARAJANAGARA | 238 | 2,795 | 3,033 |
| 12 | CHIKKABALLAPURA | 75 | 3,387 | 3,462 |
| 13 | CHIKKAMAGALURU | 97 | 2,384 | 2,481 |
| 14 | CHITRADURGA | 102 | 2,846 | 2,948 |
| 15 | DAKSHINA KANNADA | 60 | 922 | 982 |
| 16 | DAVANAGERE | 125 | 1,809 | 1,934 |
| 17 | DHARWAR | 266 | 3,271 | 3,537 |
| 18 | GADAG | 108 | 1,736 | 1,844 |
| 19 | HASSAN | 171 | 6,460 | 6,631 |
| 20 | HAVERI | 135 | 3,504 | 3,639 |
| 21 | KALABURAGI | 400 | 3,542 | 3,942 |
| 22 | KODAGU | 97 | 285 | 382 |
| 23 | KOLAR | 220 | 2,739 | 2,959 |
| 24 | KOPPAL | 56 | 825 | 881 |
| 25 | MANDYA | 190 | 6,719 | 6,909 |
| 26 | MYSURU | 139 | 6,779 | 6,918 |
| 27 | RAICHUR | 262 | 945 | 1,207 |
| 28 | BANGALORE SOUTH | 89 | 2,962 | 3,051 |
| 29 | SHIVAMOGGA | 34 | 3,034 | 3,068 |
| 30 | TUMAKURU | 179 | 5,314 | 5,493 |
| 31 | UDUPI | 199 | 1,456 | 1,655 |
| 32 | UTTARA KANNADA | 139 | 4,045 | 4,184 |
| 33 | VIJAYANAGARA | 73 | 564 | 637 |
| 34 | VIJAYAPURA | 65 | 1,191 | 1,256 |
| 35 | YADGIR | 11 | 20 | 31 |
| | Total | 4,044 | 84,769 | 88,813 |

Joint Director (IT)
Food, Civil Supplies
And Consumer Affairs
Department